**ಪಾಠ–10** **ಮೇ 28–ಜೂನ್ 3**

# ಯಾಕೋಬ– ಇಸ್ರಾಯೇಲ್



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 32:22–31; ಹೊಶೇಯ 12:3,4; ಯೆರೆಮೀಯ 30:5–9; ಆದಿಕಾಂಡ 33; ಆದಿಕಾಂಡ 34:30–35:29.

**ಸ್ಮರಣವಾಕ್ಯ : "ಅವನು ಯಾಕೋಬನಿಗೆ– ಇನ್ನು ಮೇಲೆ ನಿನ್ನ ಹೆಸರು ಯಾಕೋಬನು ಎಂದು ಕರೆಯಲ್ಪಡುವುದಿಲ್ಲ; ದೇವರ ಸಂಗಡಲೂ ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನಾದದರಿಂದ ನಿನಗೆ ಇಸ್ರಾಯೇಲೆಂದು ಹೆಸರಾಗುವುದು" ಎಂದು ಹೇಳಿದನು** (ಆದಿಕಾಂಡ 32:28).

ಯಾಕೋಬನ ಕೌಟುಂಬಿಕ ಕಥೆಯು ಮುಂದುವರೆದಿದೆ. ಒಳ್ಳೆಯದೂ ಮತ್ತು ಕೆಟ್ಟದ್ದೂ ಸಹ. ಆದರೂ, ಇವೆಲ್ಲದರಲ್ಲಿ, ದೇವರ ಹಸ್ತವೂ ಮತ್ತು ತನ್ನ ವಾಗ್ದಾನಗಳಿಗೆ ಬದ್ಧನಾಗಿಯೂ ಇರುವುದು ಸ್ಫುಟವಾಗಿವೆ.

ಈ ವಾರ ಹೆಚ್ಚಾಗಿ ಯಾಕೋಬನ ಬಗ್ಗೆ, ಈಗ ಆತನು ಲಾಬಾನನ್ನು ಬಿಟ್ಟು, ತನ್ನ ಮನೆಯ ಕಡೆ ಬರುತ್ತಿರಲು, ಯಾಕೋಬನ ವಿಶ್ವಾಸದ್ರೋಹದ ಬಲಿಪಶುವಾಗಿದ್ದ ಏಸಾವನನ್ನು ಎದುಗೊಳ್ಳಬೇಕಿದೆ. ಬಹಳ ತೀವ್ರವಾಗಿ ಕೆಡುಕನ್ನು ಅನುಭವಿಸಿರುವ ತನ್ನ ಅಣ್ಣನು, ಅವನಿಗೇನು ಮಾಡಬಹುದು?

ಆದರೂ ಯಾಕೋಬನಿಗೆ, ಭಾಗ್ಯಶಾಲಿಯಂತೆ ಮುಂದಾಗುವುದರ ಭಯದ ನಡುವೆ ತನ್ನ ಪಿತೃಗಳ ದೇವರಾದ ಕರ್ತನು ಅವನಿಗೆ ಪುನಃ ಕಾಣಿಸಿಕೊಂಡನು.

* ಈ ಪಾಠವನ್ನು ಜೂನ್ 4ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಈ ಘಟನೆಯು ಮುಂದೆ "ಯಾಕೋಬನ ಇಕ್ಕಟ್ಟಿನ ಕಾಲ" (ಯೆರೆ 30:5–7) ಎಂಬುದರ ಪೂರ್ವಸೂಚಕ ಘಟನೆಯಾಗಿತ್ತು. ಮತ್ತು ಆ ರಾತ್ರಿಯಲ್ಲಿ ಆ ಮೋಸಗಾರನು, "ಇಸ್ರಾಯೇಲ"ನಾದನು– ಹೊಸ ಪ್ರಾರಂಭಕ್ಕೆ ಹೊಸಹೆಸರು. ಈ ಆರಂಭವೇ ಅಂತ್ಯದಲ್ಲಿ ಅದೇ ಹೆಸರಿನಿಂದ ಕರೆಯಲ್ಪಟ್ಟ ಒಂದು ದೇಶವು ರೂಪುಗೊಳ್ಳುವುದಕ್ಕೆ ದಾರಿಮಾಡಿತು.

ಬೇರೆ ಮಾತಿನಲ್ಲಿ ಹೇಳುವುದಾದರೆ, ಘಟಿಸಿದ ಎಲ್ಲಾ ಘಟನೆಗಳ ಹೊರತಾಗಿಯೂ, ನಮ್ಮ ಪೂರ್ವಪಿತೃಗಳ ಮತ್ತು ಅವರ ಕುಟುಂಬಗಳ ಚರಿತ್ರೆಗಳು ಶಾಸ್ತ್ರದಲ್ಲಿ ಬರೆದಿರುವುದು, ನಮಗೆ ದೇವರು ತಾನು ಮಾಡಿದ ವಾಗ್ದಾನಗಳಿಗೆ ಬದ್ಧನಾಗಿರುತ್ತಾನೆ, ಅವುಗಳನ್ನು ನೆರವೇರಿಸುತ್ತಾನೆ, ಮತ್ತು ಕೆಲವೊಮ್ಮೆ ಏನೂ ಸಾಗದೆ, ಕೇವಲ ಆತನ ಜನರು ಅವು ನೆರವೇರುವುದಕ್ಕೆ ಎಲ್ಲಾದರಲ್ಲಿ ಅಡ್ಡಿಯಾಗಿದ್ದಾರೆ ಎಂದು ತೋರಿದರೂ, ಆತನು ಕೈಗೂಡಿಸುವನು ಎಂದು ತೋರಿಸಿಕೊಡಲು ಬರೆಯಲಾಗಿವೆ.

**ಭಾನುವಾರ** **ಮೇ 29**

## ದೇವರೊಂದಿಗೆ ಹೋರಾಡುವುದು

ಲಾಬಾನನನ್ನು ಬಿಟ್ಟು ಹೊರಟಕೂಡಲೇ, ದೇವರೊಂದಿಗೆ ಇನ್ನೊಂದು ಅನುಭವ ಪಡೆದನು. ತನ್ನ ಅಣ್ಣ ಏಸಾವನು, "ನಾಲ್ಕುನೂರು ಜನರೊಡನೆ" ಬರುತ್ತಿದ್ದಾನೆ ಎಂದು ತಿಳಿದು, ದೇವರಿಗೆ ಬಹಳ ಆಸಕ್ತನಾಗಿ ಪ್ರಾರ್ಥಿಸುವನು (ಆದಿ 32:6). "ನೀನು ನಿನ್ನ ಸೇವಕನಿಗೆ ತೋರಿಸಿದ ಎಲ್ಲಾ ಕರುಣೆ ಮತ್ತು ಎಲ್ಲಾ ಸತ್ಯತೆಗೆ ನಾನು ಕೇವಲ ಅಯೋಗ್ಯನಾಗಿದ್ದೇನೆ" (ಆದಿಕಾಂಡ 32:10).

ನಿಜವಾಗಿಯೂ, ಯಾಕೋಬನಿಗೆ ಕೃಪೆಯ ಬಗ್ಗೆ ಉತ್ತಮ ತಿಳುವಳಿಕೆ ಬಂದಿದೆ. ದೇವರು ಹೇಗೆ ಸ್ಪಂದಿಸಿದನು?

ಆದಿಕಾಂಡ 32:22–31 ಮತ್ತು ಹೋಶೇಯ 12:13,14ನ್ನು ಓದಿರಿ. ಈ ಅತಿಶಯವಾದ ಘಟನೆಯ ಆತ್ಮೀಕ ಮಹತ್ವ ಏನು?

ಕಳವಳಗೊಂಡ ಯಾಕೋಬನು, ಬಂದಂಥವುಗಳಿಂದ ತನ್ನ ಕುಟುಂಬವನ್ನು ಕಾಪಾಡಲು ತನಗೆ ಸಾಧ್ಯವಾದಂಥವೆಲ್ಲವನ್ನು ಮಾಡಿದ ಮೇಲೆ, ಆತನು ರಾತ್ರಿಯಲ್ಲಿ ಒಬ್ಬನೇ ಉಳಿದುಕೊಳ್ಳುವನು. "ಒಬ್ಬ ಪುರುಷನು" (ಆದಿಕಾಂಡ 32:24) ಆತನ

ಮೇಲೆ ಅನಿರೀಕ್ಷಿತವಾಗಿ ಬಿದ್ದನು. ಈ ಪದವು ವಿಶೇಷವಾದ ಮೂಲಾರ್ಥವನ್ನು ಹೊಂದಿದ್ದು, ದೈವೀಕ ಪ್ರಸನ್ನತೆಯ ಬರುವಿಕೆಯನ್ನು (ಯೆಶಾಯ 53:3) ತಿಳಿಸುತ್ತದೆ. ದಾನಿಯೇಲನು ಅದನ್ನು ಪರಲೋಕದ ಯಾಜಕ ಮಿಕಾಯೇಲನಿಗೆ (ದಾನಿ 10:5) ಹೋಲಿಸುತ್ತಾನೆ; ಅದೇ ಪದವನ್ನು ಯೆಹೋಶುವ ಪುಸ್ತಕದಲ್ಲಿ "ಯೆಹೋವನ ಸೇನಾಪತಿ"ಯಾಗಿ ಬಂದಿದ್ದು ಸ್ವತಃ ಕರ್ತನಾದ ಯೆಹೋವನು ಎಂಬುದಕ್ಕೆ ಬಳಸಲಾಗಿದೆ (ಯೆಹೋಶುವ 5:13–15).

ನಿಜವಾಗಿ, ಆತನು ಹೋರಾಡುತ್ತಿರುವಾಗ ತಾನು ದೇವರೊಂದಿಗೆಯೇ ಹೋರಾಡುತ್ತಿರುವೆನು ಎಂದು ಯಾಕೋಬನಿಗೆ ಗೊತ್ತಾಗಿರುತ್ತದೆ. ಆತನು ಆಕಾರಣ, "ನೀನು ನನ್ನನ್ನು ಆಶೀರ್ವದಿಸಿದ ಹೊರತು ನಾನು ನಿನ್ನನ್ನು ಬಿಡುವುದಿಲ್ಲ!" (ಆದಿಕಾಂಡ 32:26) ಎಂದು ಹೇಳಿದನು. ಆದರೂ ದೇವರನ್ನು, ಗಾಢವಾಗಿ ಹಿಡಿದುಕೊಂಡು, ಹೋಗಲು ಬಿಟ್ಟುಕೊಡದಿರುವುದು, ತಾನು ಕ್ಷಮೆ ಹೊಂದಲು ಇರುವ ತೀವ್ರ ಬಯಕೆ ಹಾಗು ದೇವರೊಂದಿಗೆ ಸರಿ ಮಾಡಿಕೊಳ್ಳುವ ಇಚ್ಛೆಯನ್ನು ತೋರಿಸುತ್ತದೆ.

"ಕಪಟಮೋಸದ ಮೂಲಕ ಚೊಚ್ಚಲತನವನ್ನು ಪಡಕೊಂಡ ಯಾಕೋಬನ ಪಾಪಕ್ಕೆ ಎಡೆಮಾಡಿದ ದೋಷವನ್ನು ಈಗ ಸ್ಪಷ್ಟವಾಗಿ ಆತನಿಗೆ ತೋರಿಸಲಾಯಿತು. ದೇವರ ವಾಗ್ದಾನಗಳನ್ನು ನಂಬದೇ, ದೇವರು ತನ್ನ ಸಮಯ ಹಾಗೂ ರೀತಿಯಲ್ಲಿ ನೆರವೇರಿಸುತ್ತಿದ್ದರ ಬದಲು ತನ್ನ (ಯಾಕೋಬ) ಸ್ವಂತ ಶ್ರಮದ ಮೂಲಕ ಆ ವಾಗ್ದಾನಗಳು ನೆರವೇರಬಯಸಿದನು"– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 197, 198.

ಮತ್ತು ತಾನು ಕ್ಷಮಿಸಲ್ಪಟ್ಟವನಾಗಿದ್ದೇನೆಂದು ತಿಳಿಯಲು ತನ್ನ ಹೆಸರು– ತನ್ನ ಪಾಪದ ಜ್ಞಾಪಕವನ್ನು ಉಳಿಸುವ ಹೆಸರಿನಿಂದ ತನ್ನ ಜಯವನ್ನು ಜ್ಞಾಪಕ ಮಾಡುವಂಥದ್ದಕ್ಕೆ ಬದಲಾದದ್ದರಲ್ಲಿ ಸಾಕ್ಷಿ ಹೊಂದುತ್ತಾನೆ. 'ಆ ದೂತನು ಅವನಿಗೆ, "ನಿನ್ನ ಹೆಸರು ಇನ್ನು ಮುಂದೆ ಯಾಕೋಬ (ಮೋಸಗಾರ)ನೆನಿಸಿಕೊಳ್ಳದೇ, ಇಸ್ರಾಯೇಲನೆಂದಿರುವುದು; ಏಕೆಂದರೆ ನೀನು ದೇವರ ಸಂಗಡಲೂ ಮತ್ತು ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನಾಗಿದ್ದಿ" (ಆದಿ 32:28).

ದೇವರೊಂದಿಗೆ ಹೋರಾಡುವ ವಿಷಯದಲ್ಲಿ ನಿಮ್ಮ ಸ್ವಂತ ಅನುಭವ ಏನು? ಹಾಗೆ ಮಾಡುವುದರ ಅರ್ಥವೇನು ಮತ್ತು ಈ ರೀತಿಯ ಅನುಭವದಲ್ಲಿ ನಾವು ಸೇರಿರಬೇಕೆಂಬುದು ಏಕೆ ಮಹತ್ವದ್ದಾಗಿದೆ?

**ಸೋಮವಾರ** **ಮೇ 30**

## ಸಹೋದರರು ಸಂಧಿಸಿದರು

ಪೆನೀಯೇಲ್ ಅಂದರೆ "ದೇವರ ಮುಖ" ಎಂಬ ಸ್ಥಳದಲ್ಲಿ ದೇವರೊಂದಿಗೆ ಆದ ಅನುಭವದ ನಂತರ, ಯಾಕೋಬನು ತನ್ನ ಅಣ್ಣನನ್ನು ಎದುರುಗೊಳ್ಳುವುದಕ್ಕೆ ಹೋದನು. ಇಪ್ಪತ್ತು ವರುಷಗಳ ಅಗಲಿಕೆಯ ನಂತರ, ನಾನೂರು ಜನರೊಡನೆ ಆತನು ಬರುತ್ತಿರುವುದನ್ನು ನೋಡುತ್ತಾನೆ (ಆದಿ 33:1). ಆದ್ದರಿಂದ, ತನ್ನನ್ನು ಮತ್ತು ತನ್ನ ಕುಟುಂಬವನ್ನು ಆಗಬಹುದಾದ ಅಪಾಯಕ್ಕೆ ಒಳಗಾಗದಂತೆ ಯೋಚಿಸಿ ಸಿದ್ಧಪಡಿಸುತ್ತಾನೆ.

ಆದಿಕಾಂಡ 33ನ್ನು ಓದಿರಿ. ದೇವರನ್ನು ಮುಖಾಮುಖಿಯಾಗಿ ಪೆನೀಯೇಲ್‌ನಲ್ಲಿ ನೋಡಿದಕ್ಕೂ ಮತ್ತು ತನ್ನ ಅಣ್ಣನನ್ನು ಮುಖಾಮುಖಿಯಾಗಿ ನೋಡಿದ್ದಕ್ಕೂ ಯಾಕೋಬನ ಈ ಎರಡೂ ಅನುಭವಗಳಲ್ಲಿರುವ ಸಂಬಂಧ ಏನಿದೆ? ಅಂತೆಯೇ ನಾವು ನಮ್ಮ ದೇವರೊಂದಿಗೂ ಮತ್ತು ಯಾರಾದರಾಗಲಿ, ನಮ್ಮ "ಸಹೋದರರಿಗೂ" ನಮ್ಮ ಸಂಬಂಧದ ಕುರಿತು ಆ ಸಂಬಂಧವು ಯಾವ ರೀತಿಯ ಪರಿಣಾಮದ ಪ್ರಭಾವ ಬೀರುತ್ತದೆ?

ಯಾಕೋಬನು ತನ್ನ ಅಣ್ಣನಿಗೆ ಏಳು ಸಾರಿ ಬಾಗಿ ವಂದಿಸುತ್ತಾನೆ (ಆದಿ 33:3) ಮತ್ತು ಅನೇಕ ಸಾರಿ "ನನ್ನ ಒಡೆಯ" ಎಂದು ಸಂಬೋಧಿಸುತ್ತಾನೆ (ಆದಿ 33:8, 13,15) ಮತ್ತು ಅವನೊಂದಿಗೆ ತನ್ನನ್ನು "ಸೇವಕ"ನೆಂದು ಗುರುತಿಸಿಕೊಳ್ಳುತ್ತಾನೆ (ಆದಿ 33:5 ಮತ್ತು ಆದಿ 32:4,18,20 ಹೋಲಿಸಿ). ಪ್ರಧಾನವಾಗಿ ತೋರುವುದೇನೆಂದರೆ, ಯಾಕೋಬನು ಏಳು ಸಾರಿ ಬಾಗಿ ವಂದಿಸುವುದು ತನ್ನ ತಂದೆಯ ಆಶೀರ್ವಾದಗಳನ್ನು ಮಾರ್ದನಿಸುತ್ತವೆ (ಆದಿಕಾಂಡ 27:27–29).

ಏಸಾವನು ತನ್ನ ತಮ್ಮನನ್ನು ಕಂಡಾಗ, ಇದ್ದ ಎಲ್ಲಾ ಕಲ್ಪನೆಗಳಿಗೂ ವಿರುದ್ಧವಾಗಿ, ಯಾಕೋಬನೆಡೆಗೆ ಓಡಿಹೋಗಿ, ಆತನನ್ನು ಕೊಲ್ಲುವ ಬದಲಿಗೆ, "ಆತನ ಕೊರಳನ್ನು ಅಪ್ಪಿಕೊಂಡು ಮುದ್ದಿಟ್ಟನು" (ಆದಿ 33:4) ಮತ್ತು "ಅವರಿಬ್ಬರೂ ಕಣ್ಣೀರಿಟ್ಟರು".

ನಂತರ ಯಾಕೋಬನು ಏಸಾವನಿಗೆ, "ನಿನ್ನನ್ನು ನೋಡಿದ್ದು ದೇವರನ್ನು ನೋಡಿದ ಹಾಗಾಯಿತು" (ಆದಿಕಾಂಡ 33:10). ಹೀಗೆ ಅವನು ಹೇಳಿದ್ದಕ್ಕೆ ಕಾರಣ ಏಸಾವನು ತನ್ನನ್ನು ಕ್ಷಮಿಸಿದ್ದಾನೆಂದು ತಿಳಿದದ್ದೇ. ಆದಿಕಾಂಡ 33:10ರಲ್ಲಿ ಮೂಲ ಇಬ್ರಿಯ ಪದ ರಾಜ್‌ಸಃ' ಎಂದರೆ ದೇವರು ಯಜ್ಞವನ್ನು ಒಪ್ಪಿಕೊಂಡಿರುವುದು, "ಅಂಗೀಕರಿಸಿರುವುದು" ಎಂದರೆ ದೈವೀಕ ಕ್ಷಮಾಪಣೆಯನ್ನು ತೋರಿಸುತ್ತದೆ (ಯಾಜಕ 22:27, ಆಮೋಸ 5:22).

ಪೆನೀಯೇಲ್ ಎಂಬಲ್ಲಿ ಯಾಕೋಬನು ದೇವರ ಕ್ಷಮಾಪಣೆಯನ್ನು ಅನುಭವಿಸಿದ ಹಾಗೆಯೇ ಮತ್ತು ಅಲ್ಲಿ ದೇವರನ್ನು ಮುಖಾಮುಖಿಯಾಗಿ ನೋಡಿದ್ದುದು, ಈಗ ತನ್ನ ಅಣ್ಣನು ತೋರಿಸಿದ ಕ್ಷಮಾಪಣೆಯನ್ನು, ದೇವರನ್ನು ಮತ್ತೊಮ್ಮೆ ನೋಡಿದ ಹಾಗಾಯಿತು ಎಂದು ನೆನೆಸಿದನು. ಮೊದಲ ಪೆನೀಯೇಲ್ ಎರಡನೆಯದಕ್ಕೆ ಸಿದ್ಧ ಮಾಡಿತೆಂಬ ಹಾಗೆ ಯಾಕೋಬನು ಎರಡನೇ ಪೆನೀಯೇಲ್‌ನಲ್ಲಿ ಉಳಿದುಕೊಂಡನು. ಯಾಕೋಬನು ದೇವರಿಂದಲೂ ಮತ್ತು ತನ್ನ ಸ್ವಂತ ಅಣ್ಣನಿಂದಲೂ ಕ್ಷಮಿಸಲ್ಪಟ್ಟಿದ್ದಾನೆ. ನಿಜವಾಗಿಯೂ, ಹಿಂದೆಂದಿಗಿಂತಲೂ ಈಗ ಕೃಪೆಯ ಅರ್ಥವನ್ನು ಮತ್ತಷ್ಟು ಹೆಚ್ಚಾಗಿ ಅರ್ಥಮಾಡಿಕೊಂಡಿರಬಹುದು.

ದೇವರು ನಮ್ಮನ್ನು ಕ್ಷಮಿಸಿರುವುದರ ಹೊರತಾಗಿ, ಬೇರೆಯವರು ನಿಮ್ಮನ್ನು ಕ್ಷಮಿಸಿದ್ದರಿಂದ ನೀವು ಕೃಪೆಯ ಬಗ್ಗೆ ಏನು ಅರ್ಥಮಾಡಿಕೊಂಡಿದ್ದೀರಿ?

**ಮಂಗಳವಾರ** **ಮೇ 31**

## ದೀನಳಿಗಾದ ನಿಂದಾಪಮಾನ

ತನ್ನ ಅಣ್ಣನೊಂದಿಗೆ ಸಮಾಧಾನವಾದ ನಂತರ, ಯಾಕೋಬನು ಕಾನಾನ್ ದೇಶದಲ್ಲಿ ಸಮಾಧಾನದಲ್ಲಿ ನೆಲೆಸಬೇಕೆಂದು ಬಯಸಿದನು. ಶೆಕೆಮಿಗೆ ಸೇರಿದ "ಸಾಲೇಮ್" ಸುರಕ್ಷತೆ ಎಂಬ ಪದದ ಅರ್ಥ "ಶಾಲೋಮ್" ಅಂದರೆ "ಸಮಾಧಾನ" ಎಂಬುದರಿಂದ ಬಂದಿದ್ದು, ಮೊಟ್ಟಮೊದಲ ಬಾರಿಗೆ ತನ್ನ ಪ್ರಯಾಣದಲ್ಲಿ "ಸುರಕ್ಷತೆ" ಇರುವುದನ್ನು ಸೂಚಿಸುತ್ತಿದೆ (ಆದಿ 33:18).

ಆ ದೇಶದ ನಿವಾಸಿಗಳಿಂದ ಒಂದು ಭೂಮಿಯನ್ನು ಕ್ರಯ ತೆಗೆದುಕೊಂಡು, ಅಲ್ಲಿ ಒಂದು ಯಜ್ಞವೇದಿಯನ್ನು (ಆದಿಕಾಂಡ 33:19) ಕಟ್ಟಿ ತಾನು ದೇವರ ಮೇಲೆ ಎಷ್ಟು ನಿಜವಾಗಿ ಅವಲಂಬಿತನು ಮತ್ತು ದೇವರನ್ನು ನಂಬಿದ್ದೇನೆಂದು

ತೋರ್ಪಡಿಸಿದನು. ಅರ್ಪಿಸಲಾದ ಪ್ರತಿ ಯಜ್ಞದೊಂದಿಗೆ, ಆರಾಧನೆಯು ಸಹ ಇರುತ್ತಿತ್ತು.

ಆದರೂ, ತನ್ನ ಜೀವನದಲ್ಲಿ ಯಾಕೋಬ ಇಸ್ರಾಯೇಲನು ಆ ದೇಶದಲ್ಲಿ ನೆಲೆಗೊಂಡ ಮೇಲೆ, ಮೊದಲಬಾರಿ ಸಮಸ್ಯೆಗೆ ತುತ್ತಾದನು. ಗೆರಾರಿನಲ್ಲಿ ಇಸಾಕನು ಅಬೀಮೆಲೆಕನೊಡನೆ (ಆದಿ 26:1–33) ಮಾಡಿದಂತೆಯೇ, ಯಾಕೋಬನು ಕಾನಾನ್ಯರೊಂದಿಗೆ ಹೊಂದಿಕೊಂಡಿರುವುದಕ್ಕೆ ಬಯಸುತ್ತಾನೆ.

ಆದಿಕಾಂಡ 34ನ್ನು ಓದಿರಿ. ಆತನು ಸಮಾಧಾನದಿಂದ ಜೀವಿಸಬೇಕೆಂಬ ಆತನ ಯೋಚನೆಗೆ ಏನು ಅಡ್ಡಿಮಾಡಿತು?

ಈ ಕಥೆಯ ನೀಚ ಘಟನೆಯು ವ್ಯಕ್ತಿಗಳ ಮತ್ತು ಅವರ ಕ್ರಿಯೆಗಳಲ್ಲಿರುವ ಗೊಂದಲಗಳನ್ನು ಎತ್ತಿ ತೋರುತ್ತದೆ. ಲಂಪಟ ಶೆಖೆಮನು, ದೀನಗಳನ್ನು ಕೆಡಿಸುತ್ತಾನೆ; ಮತ್ತು ಆತನು ಪ್ರಾಮಾಣಿಕನು ಮತ್ತು ದೀನಳನ್ನು ಪ್ರೀತಿಸುವವನು ಎಂದು ಬರೆಯಲಾಗಿದೆ ಮತ್ತು ಮಾಡಿರುವುದನ್ನು ಸರಿಮಾಡಿಕೊಳ್ಳುವುದಕ್ಕೆ ಬಯಸುತ್ತಾನೆ ಮತ್ತು ಸುನ್ನತಿ ಮಾಡಿಸಿಕೊಂಡು ಒಡಂಬಡಿಕೆಯ ಆಚರಣೆಯನ್ನು ಕೈಗೂಡಿಸಲೂ ಸಹ ಒಪ್ಪುತ್ತಾನೆ.

ಅದೇ ಸಮಯ, ಸಿಮಿಯೋನ ಮತ್ತು ಲೇವಿಯರು, ದೇವರ ಮತ್ತು ಆಜ್ಞೆಗಳ ಸಂರಕ್ಷಕರೆಂದು ಹೇಳಿಕೊಂಡು ಮತ್ತು ಕಾನಾನ್ಯರೊಡನೆ ಮದುವೆಯಾಗುವುದನ್ನು ವಿರೋಧಿಸುವವರೆಂದು ಹೇಳಿಕೊಂಡು, ಮೋಸ ಹಾಗೂ ಸುಳ್ಳನ್ನು ನೆಚ್ಚಿಕೊಂಡರು (ಆದಿಕಾಂಡ 34:13; ಯಾಜಕ 19:29) ಮತ್ತು ಹತಿಸುವುದಕ್ಕೂ ಮತ್ತು ಕೊಳ್ಳೆ ಮಾಡುವುದಕ್ಕೂ ಸಿದ್ಧರಾಗಿದ್ದಾರೆ (ಆದಿ 34:25–27). ಅವರ ಕ್ರಿಯೆಗಳು ಕೇವಲ ಆಕ್ಷೇಪಾರ್ಹವಲ್ಲ, (ತಪ್ಪು ಮಾಡಿದವನನ್ನು ಏಕೆ ದಂಡಿಸಬಾರದು?) ಬದಲು ಇನ್ನೂ ಹೆಚ್ಚಿನ ತೊಂದರೆ ತರುವ ಸಾಧ್ಯತೆಗಳನ್ನು ಹೊಂದಿತ್ತು.

ಯಾಕೋಬನೋ, ಕೇವಲ ಸಮಾಧಾನ ಮನಸ್ಕನಾಗಿದ್ದಾನೆ. ಮಗಳಿಗಾದ ಬಲಾತ್ಕಾರದ ಸುದ್ದಿಯನ್ನು ಕೇಳಿ ಆತನು ಏನು ಪ್ರತಿಕ್ರಿಯೆ ತೋರಲಿಲ್ಲ (ಆದಿ 34:5). ಆದರೆ, ತನ್ನಿಬ್ಬರು ಮಕ್ಕಳು ಮಾಡಿದ್ದನ್ನು ಕೇಳಿದೊಡನೆ ಅವರನ್ನು ಬಹಿರಂಗವಾಗಿ ಬಯ್ಯುವವನಾಗಿ, "ನೀವು ಈ ದೇಶದ ನಿವಾಸಿಗಳಾದ ಕಾನಾನ್ಯರೂ

ಮತ್ತು ಪೆರಿಜೀಯರು ನನ್ನ ಹೆಸರನ್ನು ಅಸಹ್ಯಿಸುವಂತೆ ಮಾಡಿ ನನ್ನನ್ನು ಅಪಾಯಕ್ಕೆ ಗುರಿಮಾಡಿದ್ದೀರಿ. ನನಗಿರುವ ಜನರು ಸ್ವಲ್ಪವೇ; ಈ ದೇಶದವರು ಒಟ್ಟಾಗಿ ನನ್ನ ಮೇಲೆ ಬಂದು ನನ್ನನ್ನು ಹೊಡೆದರೆ ನಾನು ನನ್ನ ಮನೆಯವರೆಲ್ಲರೂ ನಾಶವಾಗುವೆವು" ಎಂದು ಮುಂದಾಗುವುದರ ಕುರಿತು ಚಿಂತಿತನಾಗಿದ್ದಾನೆ (ಆದಿಕಾಂಡ 34:30).

ಪುನಃ ಪುನಃ ನಾವು ಮೋಸ ಹಾಗೂ ವಂಚನೆಯನ್ನು ನೋಡುತ್ತೇವೆ, ಮತ್ತು ಕರುಣೆ ಮತ್ತು ಕೃಪೆಯನ್ನು ಈ ಭಾಗಗಳಲ್ಲಿ ನೋಡುವೆವು. ಇದು ಮಾನವ ಸ್ವಭಾವದ ಕುರಿತು ಏನು ಹೇಳುತ್ತದೆ?

**ಬುಧವಾರ** **ಜೂನ್ 1**

## ಹೆಚ್ಚು ಬಳಕೆಯಲ್ಲಿರುವ ವಿಗ್ರಹಾರಾಧನೆ

ಆದಿಕಾಂಡ 34:30–35:15 ಇಲ್ಲಿ ಆದ ಘಟನೆಯಿಂದ, ನಿಜ ಆರಾಧನೆಯ ಬಗ್ಗೆ ನಾವು ಯಾವ ಪಾಠಗಳನ್ನು ಕಲಿಯಬಹುದು?

ಯಾಕೋಬನು ಕಾನಾನ್ಯರೊಂದಿಗೆ ತನ್ನ ಸಮಾಧಾನಕ್ಕೆ ಧಕ್ಕೆಯಾಯಿತು (ಆದಿ 34:30) ಎಂದು ಆಪಾದಿಸಿ ತನ್ನ ಇಬ್ಬರು ಮಕ್ಕಳನ್ನು ಗದರಿಸಿದ ಮೇಲೆ (ಆದಿಕಾಂಡ 34:30) ದೇವರು ಯಾಕೋಬನಿಗೆ ಶೆಕೆಮ್ ಬಿಟ್ಟು ಬೆತೇಲಿಗೆ ಹೋಗಬೇಕು ಮತ್ತು ಅಲ್ಲಿ ಒಡಂಬಡಿಕೆಯನ್ನು ನವೀಕರಿಸಬೇಕೆಂದು ಹೇಳುತ್ತಾನೆ. ಮತ್ತು ಆತನು ಅಲ್ಲಿ ಸೇರಿದ ತಕ್ಷಣ ಒಂದು ಯಜ್ಞವೇದಿಯನ್ನು ಕಟ್ಟಬೇಕೆಂದು ಕರ್ತನು ಹೇಳುತ್ತಾನೆ.

ಏತನ್ಮಧ್ಯೆ, ದೇವರು ಕೊಟ್ಟ ಈ ಅಪ್ಪಣೆಯ ತಕ್ಷಣದಲ್ಲಿ, ಯಾಕೋಬನು ತನ್ನ ಮನೆಯವರಿಗೆಲ್ಲಾ ಕಾನಾನ್ಯರ ವಿಗ್ರಹಗಳನ್ನು ಮತ್ತು ಶೆಕೆಮ್ ಪಟ್ಟಣವನ್ನು ಕೊಳ್ಳೆ ಮಾಡಿದಾಗ ತೆಗೆದುಕೊಂಡ ವಿಗ್ರಹ ಮತ್ತು ರಾಹೇಲಳು ತನ್ನ ಮನೆಯವರಿಂದ ಕದ್ದಿದ್ದ ವಿಗ್ರಹಗಳನ್ನು (ಆದಿ 31:19,32) ತೆಗೆದುಹಾಕಬೇಕೆಂದು ಹೇಳುವುದನ್ನು ಬರೆಯಲಾಗಿದೆ. ಇವೆಲ್ಲ ಕೂಡ, ದೇವರೊಂದಿಗೆ ಒಡಂಬಡಿಕೆಯಲ್ಲಿ ಬಹಳ ಪ್ರಮುಖವಾದವುಗಳು.

ದೇವರಿಗೆ ಯಾಕೋಬನು ಬದ್ಧನಾಗಿದ್ದರೂ, ಈ ವಿಗ್ರಹಗಳು ಇದ್ದವು ಮತ್ತು ಇವನ್ನು ಆರಾಧಿಸುತ್ತಿರಲೂಬಹುದು. ಕಾನಾನ್ಯರ ಪ್ರಭಾವದಿಂದ ದೂರಾಗಲು,

ಯಾಕೋಬನು ಕೇವಲ ಶೆಕೆಮನ್ನು ಬಿಟ್ಟರೆ ಸಾಲದು. ತನ್ನ ಕುಟುಂಬದವರಿಂದ ಮತ್ತು ಅವರ ಹೃದಯಗಳಿಂದ ವಿಗ್ರಹಗಳನ್ನು ಯಾಕೋಬನು ತೆಗೆದುಹಾಕಬೇಕಿತ್ತು.

ಪಶ್ಚಾತ್ತಾಪದ ಪ್ರಕ್ರಿಯೆಯಲ್ಲಿ– ಸ್ಥಳ ಬದಲಾವಣೆ ಅಥವಾ ಸಭೆಯ ಬದಲಾವಣೆ ಮಾಡಿಕೊಳ್ಳುವುದಲ್ಲ; ಬದಲಾಗಿ ಬಹಳ ಉನ್ನತವಾದ ಅಂಶಗಳು ಅದರಲ್ಲಿವೆ. ಬಹಳ ಪ್ರಮುಖ ಅಂಶವೆಂದರೆ ನಾವು ಎಲ್ಲೇ ಇದ್ದಾಗ್ಯೂ, ನಮ್ಮ ಹೃದಯಗಳಿಂದ ವಿಗ್ರಹಗಳು ತೊಳೆಯಲ್ಪಡಲು ದೇವರ ಕೃಪೆಯನ್ನು ನಾವು ಬೇಡಿಕೊಳ್ಳಬೇಕು. ಏಕೆಂದರೆ ಯಾವುದೇ ವಸ್ತು (ಅಥವಾ ವಿಚಾರ)ವನ್ನೇ ನಾವು ವಿಗ್ರಹ ಮಾಡಿಕೊಂಡಿರಬಹುದು.

ಯಾಕೋಬನು ದೇವರಿಗೆ ವಿಧೇಯನಾಗಿ, ದೇವರ ಅಪ್ಪಣೆಯ ಮೇರೆಗೆ ಮುಂದುವರೆದಾಗ ದೇವರು ಮಧ್ಯಪ್ರವೇಶಿಸಿದನು. "ದೇವರ ಭಯವು" (ಆದಿ 35:5) ಅವರ ಸುತ್ತಲಿದ್ದವರ ಮೇಲೆ ಪ್ರಭಾವ ಬೀರಿ, ಯಾಕೋಬನ ಮೇಲೆ ಆಕ್ರಮಣ ಮಾಡಲು ಧೈರ್ಯ ಮಾಡುವುದಿಲ್ಲ. ಆಗ, ಯಾಕೋಬನು, "ತನ್ನ ಜೊತೆಯಲ್ಲಿದ್ದವರೆಲ್ಲರೊಂದಿಗೆ" ದೇವರನ್ನು ಆರಾಧಿಸಲು ಸಿದ್ಧನಿರುವನು (ಆದಿ 35:66). ಇದರಲ್ಲಿ ಆತನ ಕುಟುಂಬದ ಐಕ್ಯತೆಯು ಏರ್ಪಟ್ಟಿದೆ ಎಂದು ತಿಳಿಯುತ್ತೇವೆ. ಆ ಸ್ಥಳಕ್ಕೆ ಯಾಕೋಬನು, ನಿಚ್ಚಣಿಗೆಯ ಕನಸಿನ ನೆನಪಿಗಾಗಿ, ಮತ್ತು ಪರಲೋಕ ಹಾಗು ಭೂಲೋಕಗಳು ಒಂದಾದ್ದರ ಕಾರಣ ಎಲ್ ಬೆತೇಲ್ ಎಂದು ಹೆಸರಿಟ್ಟನು. ಕೆಲಕಾಲ ಕಳೆದು ಹೋಗಿದ್ದ ಪರಲೋಕ–ಭೂಲೋಕ ಸಂಬಂಧಗಳು ಈಗ ನವೀಕರಣಗೊಂಡಿದೆ.

ಈ ಬಾರಿ, ಇಡಲಾದ ಹೆಸರಿಗೆ ಸ್ಥಳದ ಮಹತ್ವದ ಬದಲಿಗೆ ಬೆತೇಲಿನ ದೇವರ ಮಹತ್ವದ ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟನು. ಈ ರೀತಿಯ ಅಂಶವು ದೇವರು ಅವನ ಹೆಸರು "ಇಸ್ರಾಯೇಲ"ನೆಂದು ಪುನಃ ಜ್ಞಾಪಕಪಡಿಸಿದಾಗ (ಆದಿ 35:10) ಮಾರ್ದನಿಸುತ್ತದೆ, ಜೊತೆಗೆ ಎರಡು ಪಟ್ಟು ಆಶೀರ್ವಾದದ ವಾಗ್ದಾನವನ್ನು ಅರ್ಥೈಸುತ್ತದೆ. ಯಾಕೋಬನಿಗಾದ ಆಶೀರ್ವಾದವು, ಮೊದಲು, ಸಂತಾನ ವೃದ್ಧಿ ಸಂಪನ್ನತೆ– ಮೆಸ್ಸೀಯನ ಸಂತತಿಯ ಮುಂದುವರಿಕೆ ಹಾಗೂ ಅನೇಕ ಜನಾಂಗಗಳ ಉತ್ಪತ್ತಿ (ಆದಿಕಾಂಡ 35:11) ಎಂಬುದೂ, ಮತ್ತು ಎರಡನೆಯದಾಗಿ, ಅದು ವಾಗ್ದತ್ತ ದೇಶವನ್ನು ಸೂಚಿಸುವ ಅರ್ಥ ಹೊಂದಿದೆ.

ಯಾವ ಮಾರ್ಮಿಕ ರೀತಿಯಲ್ಲಿ ವಿಗ್ರಹಾರಾಧನೆಯು ನಮ್ಮ ಹೃದಯದೊಳಗೆ ತೋರಿಬರಬಹುದು, ಮತ್ತು ಆ ಕುರಿತು ನಾವೇನು ಮಾಡಬಹುದು?

**ಗುರುವಾರ** **ಜೂನ್ 2**

## ರಾಹೇಲಳ ಮರಣವು

ಆದಿಕಾಂಡ 35:15–29ನ್ನು ಓದಿರಿ. ತನ್ನ ಲಯ ತಪ್ಪಿದ ಕುಟುಂಬದಲ್ಲಿ ಬೇರಾವ ಸಮಸ್ಯೆಯನ್ನು ಎದುರಿಸಿದನು?

ಯಾಕೋಬನು ಬೇತೇಲನ್ನು ಬಿಟ್ಟು ಹೊರಟ ಕೂಡಲೇ ಮೂರು ಪರಸ್ಪರ ಹೊಂದಿಕೊಂಡ ಘಟನೆಗಳು ವಾಗ್ದಾನದ ದೇಶ ಸೇರುವ ಕೊನೆಯ ಹಂತದಲ್ಲಿ ಆಗುತ್ತವೆ. ಯಾಕೋಬನಿಗೆ ಕೊನೆಯ ಮಗನು ಜನಿಸುವನು; ರಾಹೇಲಳು ಸಾಯುತ್ತಾಳೆ; ಲೇಯಳಲ್ಲಿ ಯಾಕೋಬನಿಗೆ ಹುಟ್ಟಿದ ಮೊದಲ ಮಗ ರೂಬೇನನು ಯಾಕೋಬನ ಉಪಪತ್ನಿಯೊಂದಿಗೆ ಕೂಡುತ್ತಾನೆ. ರೂಬೇನನು ಆ ದುಷ್ಟತ್ವವನ್ನು ಏಕೆ ಮಾಡಿದನು ಎಂದು ವಚನವು ಹೇಳಿಲ್ಲವಾದರೂ, ಯಾಕೋಬನ ಕೊನೆಯ ಮಗನ ಜನನವು ವಾಗ್ದಾನದ ದೇಶದ ಮೇರೆಯೊಳಗೆ ಇರುವ ಬೆತ್ಲೆಹೇಮ್‌ಗೆ (ಆದಿ 35:19) ಬೆಸೆದುಕೊಂಡಿದೆ. ಈ ಹುಟ್ಟು ಮುಂದೆ ಇಸ್ರಾಯೇಲ್ಯರಿಗೆ ನೆರವೇರಲಿರುವ ದೇವರ ವಾಗ್ದಾನದ ಪ್ರಥಮ ಈಡೇರಿಕೆಯಾಗಿದೆ. ರಾಹೇಲಳಿಗೆ ಹೆರಿಗೆಯ ಕಾಲದಲ್ಲಿ ಸೂಲಗಿತ್ತಿಯು ಹೇಳಿದ "ಹೆದರಬೇಡ" (ಆದಿ 35:17) ಎಂಬುದು ದೇವರು ಅಬ್ರಹಾಮನಿಗೆ ಪುನಃ ಭರವಸೆ ಕೊಡುವಾಗ ಹೇಳಿದ (ಆದಿ 15:1) ಅದೇ ಪದದ ಪ್ರವಾಸನಾತ್ಮಕ ಬಳಕೆಯಾಗಿದೆ.

ಪ್ರಮುಖವಾಗಿ, ರಾಹೇಲಳು ತಾನು ಸಾಯುವ ಮುನ್ನ ತನ್ನ ಮಗನಿಗೆ ತನ್ನ ನೋವಿನ ಸೂಚನೆಯಾಗಿ ಬೆನೋನಿ, ಅಂದರೆ "ನನ್ನ ದುಃಖದ ಮಗನು" ಎಂಬುದನ್ನು ಬೆನ್ಯಾಮಿನ್ ಅಂದರೆ "ನನ್ನ ಬಲಭುಜದ ಮಗನು" ಎಂದು ಬದಲಾಯಿಸಿದನು; ಬಹುಶಃ ಇದು ವಾಗ್ದಾನದ ದೇಶದ ಹಾಗು ಅಲ್ಲಿ ನೆಲೆಗೊಳ್ಳುವ ಆತನ ಜನರಿಗೆ ದೇವರು ಮಾಡುವ ಕಾರ್ಯಗಳ ನಿರೀಕ್ಷೆಯನ್ನು ಒಳಗೊಂಡಿತ್ತು.

ಆದರೂ, ಬಿಲ್ಹಾಳೊಂದಿಗೆ ರೂಬೇನನು ಕೂಡಿದನು; ಆಕೆಯ ರಾಹೇಲಳ ದಾಸಿಯೂ ಮತ್ತು ತನ್ನ ತಂದೆಯ ಉಪಪತ್ನಿಯೂ ಆಗಿದ್ದಳು (ಆದಿ 35:25,

ಆದಿ 30:3). ಈ ನೀಚಕೃತ್ಯವನ್ನು ಏಕೆ ಮಾಡಿದನೆಂದು ನಮಗೆ ತಿಳಿದಿಲ್ಲ; ಆದರೆ ಇದು ಮಾನವನ ನೀಚಪಾಪಿತನದ ಮತ್ತೊಂದು ಉದಾಹರಣೆ.

ಆಶ್ಚರ್ಯವೆಂದರೆ, ಈ ಮಹಾಪಾತಕತನಕ್ಕೆ ಯಾಕೋಬನು ತಕ್ಷಣ ಪ್ರತಿಕ್ರಿಯಿಸುವುದಿಲ್ಲ, ಆದರೆ ಅದನ್ನು ನಂತರ ಪ್ರಸ್ತಾಪಿಸಿದನು (ಆದಿ 35:22). ತನ್ನ ಜೀವನದ ಈ ಘಟ್ಟದಲ್ಲಿ, ಇರುವ ಎಲ್ಲಾ ಪಾಪ ಹಾಗು ದುಷ್ಟತನದ ಹೊರತಾಗಿಯೂ ದೇವರು ತನ್ನ ಮಾತನ್ನು ನೆರವೇರಿಸುವನೆಂದು ನಂಬಿರಬೇಕು.

ಈ ನಿರ್ದಿಷ್ಟ ನಂಬಿಕೆಯ ಪಾಠವು ಯಾಕೋಬನ ವಂಶಾವಳಿಯ ಮೂಲ ಪಿತೃಗಳಾದ ತನ್ನ ಹನ್ನೆರಡು ಮಂದಿ ಮಕ್ಕಳ ಹೆಸರಿನ ಪಟ್ಟಿಯಲ್ಲಿ (ಆದಿ 35:22–26) ವ್ಯಕ್ತಗೊಂಡಿದೆ. ಆ 12 ಮಂದಿ, ನಾವು ಕಾಣುವ ಹಾಗೆ ಬಹಳ ಪ್ರೀತಿ ಹಾಗೂ ದಯೆ ಹೊಂದಿದ್ದವರೇನಲ್ಲ. ಆದರೂ ಇದ್ದ ಎಲ್ಲಾ ಸಮಸ್ಯೆ, ಅಕ್ರಮ ಹಾಗೂ ಬಹಿರಂಗ ದುಷ್ಕೃತ್ಯಗಳು– ರೂಬೇನನು ಬಿಲ್ಹಾಳಿಗೆ ಮಾಡಿದ ಅವಮಾನವೂ ಸಹ ಇದ್ದಾಗ್ಯೂ, ಈ ಕುಟುಂಬದ ದೇವರ ಚಿತ್ತವು ನೆರವೇರಲಿರುವುದು.

ಮಾನವನ ದೋಷದ ಹೊರತಾಗಿ, ದೇವರ ಚಿತ್ತವು ಅಂತಿಮವಾಗಿ ನೆರವೇರುತ್ತದೆ. ಆದರೆ ಜನರು ದೇವರೊಂದಿಗೆ ಸಹಕರಿಸಿದರೆ ದೇವರಿಗೆ ವಿಧೇಯರಾದರೆ ಏನಾಗುವನೆಂದು ಆಲೋಚಿಸಿರಿ. ಎಷ್ಟು ಸುಲಭದಲ್ಲಿ ಅಂದರೆ, ಮಾನವರ ಸಂಕಟ, ಬಳಲಿಕೆ ಮತ್ತು ವಿಳಂಬಗಳು ಇರದೆ– ದೇವರ ಉದ್ದೇಶವು ನೆರವೇರಬಹುದು?

**ಶುಕ್ರವಾರ** **ಜೂನ್ 3**

**ಹೆಚ್ಚಿನ ಚಿಂತನೆಗೆ :** ಎಲೆನ್ ಜಿ ವೈಟ್‌ರವರ ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್ ಪುಟ 195–203, "ಹೋರಾಟದ ಆ ರಾತ್ರಿ" ಎಂಬ ಅಧ್ಯಾಯವನ್ನು ಓದಿರಿ.

"ಯಾಕೋಬನಿಗೆ ಆ ಹೋರಾಟದ ರಾತ್ರಿ ಮತ್ತು ಆದ ಆ ಕಳವಳದ ಅನುಭವವು, ಕ್ರಿಸ್ತನ ಎರಡನೇ ಆಗಮನದ ಪೂರ್ವದಲ್ಲಿ ದೇವರ ಜನರು ಹಾದುಹೋಗ–ಬೇಕಾಗಿರುವ ಶೋಧನೆಯ ದೃಷ್ಟಾಂತ ರೂಪವಾಗಿದೆ.... ದುಷ್ಟಶಕ್ತಿಗಳ ವಿರುದ್ಧ ದೇವಜನರ ಅಂತಿಮ ಹೋರಾಟದಲ್ಲಿ ಇಂತಹದ್ದಾಗಿರುತ್ತದೆ. ದೇವರು ಅವರ ವಿಶ್ವಾಸ, ಗುರಿ ಸಾಧನೆಯ ಅವಿರತ ಪ್ರಯತ್ನ ಮತ್ತು ತಮ್ಮನ್ನು ಬಿಡುಗಡೆ ಮಾಡುವ ದೇವರ ಸಾಮರ್ಥ್ಯದಲ್ಲಿರುವ ಅವರ ಭರವಸೆಗಳನ್ನು ಪರೀಕ್ಷಿಸುವನು. ಸೈತಾನನು

ಅವರ ಪರಿಸ್ಥಿತಿಗಳು ತೀರ ನಿರಾಶಾದಾಯಕವಾಗಿದೆ; ಏಕೆಂದರೆ, ಅವರ ಪಾಪಗಳು ಕ್ಷಮಾಪಣೆ ಹೊಂದಲಾರದಷ್ಟು ದೊಡ್ಡದು ಎಂಬ ಭಾವನೆಯನ್ನು ಹುಟ್ಟಿಸಿ ಅವರನ್ನು ದಿಗಿಲುಗೊಳಿಸಲು ಪ್ರಯತ್ನಿಸುವನು. ಅವರ ದೋಷಗಳ ಬಗ್ಗೆ ಅವರಿಗೆ ತೀವ್ರವಾದ ಅರಿವಿರುವುದು ಮತ್ತು ಅವರು ತಮ್ಮ ಜೀವನವನ್ನು ಅವಲೋಕಿಸಿ ನೋಡಿದಾಗ ಅವರ ನಿರೀಕ್ಷೆಯು ಕುಂದುವುದು. ಆದರೆ ದೇವರ ಕರುಣೆಯ ಮಹೋನ್ನತೆ ಮತ್ತು ತಮ್ಮ ಪ್ರಾಮಾಣಿಕ ಪಶ್ಚಾತ್ತಾಪವನ್ನು ಅವರು ನೆನಪಿಗೆ ತಂದುಕೊಂಡು, ಕ್ರಿಸ್ತನ ಮೂಲಕ ನಿಸ್ಸಹಾಯಕ, ಪಶ್ಚಾತ್ತಾಪಪಟ್ಟ ಪಾಪಿಗಳಿಗೆ ಮಾಡಲ್ಪಟ್ಟ ಆತನ (ದೇವರ) ವಾಗ್ದಾನಗಳ ನೆರವೇರುವಿಕೆಗಾಗಿ ಯಾಚಿಸುವರು. ತಮ್ಮ ಪ್ರಾರ್ಥನೆಗಳಿಗೆ ತಕ್ಷಣ ಉತ್ತರ ಬರದಿದ್ದರೂ ಅವರ ನಂಬಿಕೆ ಕೆಡುವುದಿಲ್ಲ. ಅವರು ಯಾಕೋಬನು ಆ ದೇವದೂತನನ್ನು ಹಿಡಿದಂತೆಯೇ, ದೇವರ ಶಕ್ತಿಯನ್ನು ಭದ್ರಹಿಡಿಯುವರು; ಮತ್ತು ಅವರ ಹೃದಯಾಂತರಾಳದ ಕೂಗು, 'ನೀನು ನನ್ನನ್ನು ಆಶೀರ್ವದಿಸಿದ ಹೊರತು, ನಾನು ನಿನ್ನನ್ನು ಬಿಡುವುದಿಲ್ಲ' ಎಂದಾಗಿರುತ್ತದೆ......

"ಆದರೂ ಯಾಕೋಬನ ಚರಿತ್ರೆಯು, ಪಾಪದಲ್ಲಿ ಮೋಸದಿಂದ ಸಿಲುಕಿಸಲ್ಪಟ್ಟವರು, ದೇವರ ಬಳಿಗೆ ನಿಜವಾದ ಪಶ್ಚಾತ್ತಾಪದಿಂದ ಹಿಂತಿರುಗಿದ ದೇವರು ಬಿಟ್ಟು ಬಿಡುವುದಿಲ್ಲ ಎಂಬುದಕ್ಕೆ ಭರವಸೆಯಾಗಿದೆ. ತನ್ನ ಸ್ವಸಾಮರ್ಥ್ಯದಿಂದ ಹೋರಾಡಿ ಗಳಿಸಿಕೊಳ್ಳಲಾರದ್ದನ್ನು ಯಾಕೋಬನು ಆತ್ಮಸಮರ್ಪಣೆ ಮತ್ತು ನೆಚ್ಚಿಕೆಯುಕ್ತ ವಿಶ್ವಾಸದ ಮೂಲಕ ಪಡೆದುಕೊಂಡನು. ಆತನು ಹಾತೊರೆಯುತ್ತಿದ್ದ ಆಶೀರ್ವಾದಗಳನ್ನು ದೈವೀಕ ಶಕ್ತಿ ಮತ್ತು ಕೃಪೆಯು ಮಾತ್ರ ಕೊಡುತ್ತದೆ ಎಂಬುದನ್ನು ದೇವರು ತನ್ನ ಸೇವಕನಿಗೆ ಕಲಿಸಿಕೊಟ್ಟನು. ಅಂತೆಯೇ ಅಂತ್ಯಕಾಲದಲ್ಲಿ ಬದುಕುವವರಿಗೂ ಆಗುವುದು. ಅವರನ್ನು ಅಪಾಯಗಳು ಸುತ್ತುವರಿದು, ಹೃದಯವನ್ನು ಹತಾಶೆಯು ಆಕ್ರಮಿಸಿದಾಗ ಅವರು ಪಾಪ ಪರಿಹಾರದ (ಪರಲೋಕದ) ಶ್ರೇಷ್ಠತೆಗಳನ್ನು ಮಾತ್ರ ಅವರು ಆಧಾರಮಾಡಿಕೊಳ್ಳಬೇಕು. ನಮ್ಮಷ್ಟಕ್ಕೆ ನಾವು ಏನೂ ಮಾಡಲಾರೆವು"– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 201–203.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯಾಕೋಬನ ಬಲಹೀನತೆಯು ದೇವರ ಕೃಪೆಯ ಸಾಧನೆಗೆ ಏಕೆ ಅವಕಾಶ ಮಾಡಿತು? ಪೌಲನ ಮಾತುಗಳಾದ- "ನಾನು ಯಾವಾಗ ನಿರ್ಬಲ-ನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ" (2 ಕೊರಿಂಥ 12:10) ಇವು ಯಾಕೋಬನ ಅನುಭವಕ್ಕೆ ಹೇಗೆ ತಾಳೆಹೊಂದುವವು?

2. ಬೈಬಲ್ ಯಾಕೆ ಅನೇಕರ ಜೀವನ ಚರಿತ್ರೆಗಳಲ್ಲಿ ಕಂಡುಬಂದ ಅನೇಕ ಕ್ಷುದ್ರ ಅಂಶಗಳನ್ನು ಬಯಲುಮಾಡುತ್ತದೆ? ಇದರಲ್ಲಿ ನಾವು ಯಾವ ಅಂಶವನ್ನು ತಿಳಿಯಬಹುದು? ನಾವೇನು ಸಂದೇಶ ಪಡೆಯಬಹುದು?

3. ವಿಗ್ರಹಾರಾಧನೆಯ ವಿಷಯದ ಬಗ್ಗೆ ಹೆಚ್ಚು ಆಲೋಚಿಸಿರಿ. ನಮ್ಮ ಸಂಪ್ರದಾಯ ನಮ್ಮ ನಾಗರೀಕತೆಗಳಲ್ಲಿರುವ ವಿಗ್ರಹಗಳೇನು? ಕರ್ತನನ್ನು ಬಿಟ್ಟು ಮತ್ಯಾರನ್ನೂ ಅಥವಾ ಮತ್ಯಾವದನ್ನೂ ನಾವು ಆರಾಧಿಸುತ್ತಿಲ್ಲ ಎಂದು ನಾವು ಹೇಗೆ ನಿಶ್ಚಯ ಮಾಡಿಕೊಳ್ಳುವುದು?